ಅ) ಇಲ್ಲ. ಉದ್ಭವಿಸುವುದಿಲ್ಲ

ಆ) ಹೌದು

ಇ) ಕರಡು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಂಪ್ಯೂಟರ್ ಶಿಕ್ಷಣ) ನಿಯಮ 1999ನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಸೀಟು ಹಂಚಿಕೆಯಲ್ಲಿ ಮೆರಿಟ್

1409 (2060)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಂ.ಬಿ.ಎ; ಎಂ.ಸಿ.ಎ ಹಾಗೂ ಬಿ.ಹೆಚ್.ಎಂ ಕೋರ್ಸುಗಳಲ್ಲಿ ಸೀಟು ಹಂಚಿಕೆಯಲ್ಲಿ ಮೆರಿಟ್ ಮತ್ತು ಮೀಸಲು ವರ್ಗದ ವಿದ್ಯಾರ್ಥಿಗಳಿಗೆ ಶೇ.50 ಮೀಸಲು ನೀಡಬೇಕೆಂದು ಸರ್ಕಾರ ನಿರ್ಧರಿಸಿದ್ದು, ನಂತರ ಈ ನಿರ್ಧಾರದಿಂದ ಸರ್ಕಾರ ಹಿಂದೆ ಸರಿದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಬಿ.ಎ.ಮೊಹಿದೀನ್ (ಉನ್ನತ ಶಿಕ್ಷಣ ಸಚಿವರು):

ಅ ಮತ್ತು ಆ) ಮೊದಲು ಖಾಸಗಿ ಕಾಲೇಜುಗಳಲ್ಲಿನ ಎಂಬಿಎ: ಎಂಸಿಎ; ಬಿಹೆಚ್ಎಂ, ಪಿಜಿಡಿಬಿಎ ಹಾಗೂ ಪಿಜಿಡಿಸಿಎ ಕೋರ್ಸುಗಳಲ್ಲಿ ಶೇಕಡ 50ರಷ್ಟು ಸೀಟುಗಳು ವಿತರಣೆಯನ್ನು ಅರ್ಹತೆ ಹಾಗೂ ಮೀಸಲಾತಿ ನೀತಿಯನ್ನು ಅನುಸರಿಸಿ ನಿರ್ಬಂಧಿಸಳ ತತ್ವಶಃ ನಿರ್ಣಯಿಸಲಾಗಿತ್ತು. ನಂತರದಲ್ಲಿ ಈ ವಿಚಾರವನ್ನು ಸಕಲವಲಯಗಳಿಂದ ಸಂವೀಕ್ಷಿಸಿ ಕೇವಲ ಸ್ನಾತಕೋತ್ತರ ಕೋರ್ಸುಗಳಿಗೆ ಈ ತಾತ್ವಿಕತೆಯನ್ನು ಸೀಮಿತಗೊಳಿಸಲು ಹಾಗೂ ಅವು ದುಬಾರಿ ಕೋರ್ಸುಗಳಾಗಿರುವುದರಿಂದ ಸಂಯೋಜನೆ ನೀಡಿದ ವರ್ಷದಿಂದ ಮೊದಲ ಮೂರು ಶೈಕ್ಷಣಿಕ ವರ್ಷಗಳ ಅವಧಿಗೆ ವಿನಾಯತಿ ನೀಡಿ ಪ್ರಾರಂಭಿಕ ಹಂತದಲ್ಲಿ ಎಂಬಿಎ: ಎಂಸಿಎ ಕೋರ್ಸುಗಳ ಶೇಕಡ 20ರಷ್ಟು ಸೀಟುಗಳ ಪ್ರವೇಶವನ್ನು ಮಾತ್ರ ನಿರ್ಬಂಧಿಸಲು ಹಾಗೂ ಕಾಲಕ್ರಮೇಣ ಭವಿಷ್ಯದಲ್ಲಿ ಅದನ್ನು ಶೇಕಡ 50ರಷ್ಟಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ.